ಶ್ರೀ ಎಂ.ವೈ. ಘೋರ್ಪಡೆ.— ಹಾಗೆ ಹೇಳುವುದು ಸರಿಯಲ್ಲ. ಮಾರ್ಚ್ ತಿಂಗಳಲ್ಲಿ ಈ ದೂರು ಸರ್ಕಾರಕ್ಕೆ ಬಂದ ಕೂಡಲೆ ಇದನ್ನು ಸಿ.ಓ.ಡಿ. ಯವರಿಂದ ಎನ್‌ಕ್ವೈರಿ ಮಾಡಿಸಬೇಕೆಂದು ಆದೇಶ ನೀಡಿದರು. ಅದರ ಪ್ರಕಾರ ಈಗ ಎನ್‌ಕ್ವೈರಿ ನಡೆಯುತ್ತಿದೆ. ಮೇ ೧೭ನೇ ತಾರೀಖು ಸಿ.ಓ.ಡಿ. ಯವರಿಂದ ಪತ್ರಬಂದಿದೆ. ಇದು ಇನ್ನೂ ಎನ್‌ಕ್ವೈರಿ ಆಗುತ್ತಿದೆ ಎಂದು ತಿಳಿದು ಬಂದಿದೆ. ಇದು ಏಪ್ರಿಲ್ ತಿಂಗಳಲ್ಲಿ ಟ್ರಾನ್ಸ್‌ಫರ್ ಆಗಿದೆ. ಇದರಲ್ಲಿ ಯಾವುದೇ ರೀತಿಯ ನಿರ್ಲಕ್ಷತೆಯೂ ನಡೆದಿಲ್ಲ. ಸಿ.ಓ.ಡಿ.ಯವರಿಂದ ವರದಿ ಬಂದಕೂಡಲೇ ತಮಗೆ ತಿಳಿಸುತ್ತೇನೆ.

ಪ್ರಕಟಣೆ

ಅಧ್ಯಕ್ಷರು.—ವಿಧಾನ ಸಭೆಯ ಸದಸ್ಯರಾದ ಶ್ರೀ ರಾಮಕೃಷ್ಣ ಹೆಗ್ಡೆ ಅವರು ದಿನಾಂಕ ೧೩ನೇ ಜೂನ್ ೧೯೯೦ ರಿಂದ ೧೪ನೇ ಜೂನ್ ೧೯೯೦ರ ವರೆಗೆ ಜೀನಾದೇಶಕ್ಕೆ ಒಂದು ನಿಯೋಗದ ಮುಂದಾಳತ್ವ ವಹಿಸಿ ಹೋಗಲಿರುವುದರಿಂದ ವಿಧಾನ ಸಭೆಯ ಅಧಿವೇಶನಕ್ಕೆ ದಿನಾಂಕ ೪-೬-೧೯೯೦ ರಿಂದ ೧೪-೬-೧೯೯೦ರ ವರೆಗೆ ಗೈರು ಹಾಜರಾಗಿಲು ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ.

ಶ್ರೀ ರಾಮಕೃಷ್ಣ ಹೆಗ್ಡೆ ಅವರು ಮೇಲೆ ಸೂಚಿಸಿದ ಅವಧಿಯಲ್ಲಿ ಸದನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೇ?

ಮಾನ್ಯ ಸದಸ್ಯರು.—ಆಗಬಹುದು.

ಅಧ್ಯಕ್ಷರು ರಾಮಕೃಷ್ಣ ಹೆಗ್ಡೆ ಅವರಿಗೆ ಗೈರು ಹಾಜರಾಗಲು ಅನುಮತಿಯನ್ನು ನೀಡಲಾಗಿದೆ.

ಕಾವೇರಿ ಜಲ ವಿವಾದದ ಬಗ್ಗೆ ಚರ್ಚೆ

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).— ಮಾನ್ಯ ಅಧ್ಯಕ್ಷರೇ, ಕಾವೇರಿ ಜಲ ವಿವಾದವನ್ನು ಪಂಚಾಯತ್ ಮಂಡಳಿಗೆ ಒಪ್ಪಿಸಿರುವುದನ್ನು ವಿರೋಧಿಸಿ ನಿನ್ನೆಗಾಗಲೇ ನಾವು ರಾಜ್ಯಾದ್ಯಂತ ಪ್ರತಿಭಟನೆಯನ್ನು ಪ್ರಾರಂಭಿಸಿದ್ದೇವೆ. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರದ ನಿಲುವು ಏನು ಎನ್ನುವುದು ಕೂಡ ಸ್ಪಷ್ಟವಾಗಿ ಗೊತ್ತಿದೆ. ತಮ್ಮ ಮೂಲಕ ಮತ್ತೊಮ್ಮೆ ಇವತ್ತು ಸರ್ಕಾರದ ಗಮನಕ್ಕೆ ತರಬಯಸಿರುವುದೇನೆಂದರೆ ಈ ಸಭೆಯಲ್ಲಿ ಕಾವೇರಿ ನೀರಿನ ಬಗ್ಗೆ ಚರ್ಚೆ ನಡೆಯತಕ್ಕ್ಕಂಥದ್ದು ಸರ್ಕಾರಕ್ಕೆ ಮೊದಲೇ ಗೊತ್ತಿತ್ತು, ಆದರೂ ಕೂಡ ಎರಡು ದಿವಸಗಳಿಂದಲೂ ಚರ್ಚೆ ನಡೆಯುತ್ತಿದ್ದರೂ ಸರ್ಕಾರದವರು ನಮ್ಮ ಯಾವ ಸದಸ್ಯರಿಗೂ ಸುಪ್ರೀಂ ಕೋರ್ಟಿನ ತೀರ್ಪನ್ನಾಗಲಿ ಮತ್ತು ಸರ್ಕಾರ ಇದುವರೆಗೆ ಕಾವೇರಿ ಪಂಚಾಯತ್ ಬಗ್ಗೆ ಕೇಂದ್ರ ಸರ್ಕಾರದೊಡನೆ ಏನೇನು ವ್ಯವಹಾರ ನಡೆಸಿದೆ ಅದರ ಕಾಗದಪತ್ರಗಳು ನಮ್ಮಮುಂದೆ ಇಲ್ಲ. ಬಹುಶಃ ಅನೇಕ ಜನ ಮಾನ್ಯ ಸದಸ್ಯರು ಇದರ ಬಗ್ಗೆ ತಿಳಿಯಬೇಕೆಂಬ ಅಕಾಂಕ್ಷೆಯನ್ನು ಹೊಂದಿರತಕ್ಕಂಥವರಿಗೆ ಇನ್ನು ಸಿಕ್ಕಿಲ್ಲ. ನಾನೂ ಕೂಡ ಈ ಮಾತನ್ನು ಸರ್ಕಾರದ ಮುಂದೆ ಇಟ್ಟಿದ್ದೆ. ಸರ್ಕಾರ ಇವತ್ತಾದರೂ ಇಡಬಹುದಾಗಿತ್ತು.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಕಾವೇರಿ ಜಲ ವಿವಾದದಬಗ್ಗೆ ಏನೇನು ಡಾಕ್ಯುಮೆಂಟ್ಸ್ ಬೇಕಾದರೂ ಅದನ್ನು ಮಾನ್ಯ ಸದಸ್ಯರಿಗೆ ಕೊಡಲು ತಯಾರಿಗಿದ್ದೇವೆ. ಸುಪ್ರಿಂಕೋರ್ಟ್ ಜಡ್ಜ್‌ಮೆಂಟ್ ಕಾಪಿಯನ್ನು ಕೇಳಿದರೂ ಅದನ್ನು ಕೊಡಲು ತಯಾರಾಗಿದ್ದೇವೆ. ಮತ್ತೆ ನಾವು ಏನೇನು ಪತ್ರವ್ಯವಹಾರಗಳನ್ನು ಮಾಡಿದ್ದೇವೆ ಅದನ್ನೂ ಕೂಡ ಕೊಡಲು ತಯಾರಾಗಿದ್ದೇವೆ ಇದರಲ್ಲೇನು ಪಂಚ್ಚುಮರೆಯಿಲ್ಲ. ಇನ್‌ಫರ್‌ಮೇಷನನ್ನು ಸಪ್ಲೈಸ್ ಮಾಡಬೇಕೆಂಬ ಇಚ್ಛೆ ಸರ್ಕಾರಕ್ಕಿಲ್ಲ. ಈ ಪ್ರಶ್ನೆ ಎಲ್ಲರಿಗೂ ಗೊತ್ತಿದೆ, ಆದು ಅಲ್ಲದೆ ವಿರೋಧಪಕ್ಷದ ನಾಯಕರ ಜೊತೆಯಲ್ಲಿ ಹಂತಹಂತದಲ್ಲೂ ಈ ಬಗ್ಗೆ ಸಮಾಲೋಚನೆ ಮಾಡುತ್ತಿರುವುದರಿಂದ ಅದರ ಅವಶ್ಯಕತೆ ಇಲ್ಲವೆಂದು ಭಾವಿಸಿದ್ದೆ. ಆದರೆ ಈಗ ಏನು ಇನ್‌ಫರ್‌ಮೇಷನ್ ಕೇಳಿದರೂ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮುಚ್ಚಿಡುತ್ತಿದ್ದಾರೆ ಎನ್ನುವ ಭಾವನೆಯಿಂದ ಹೇಳುತ್ತಿಲ್ಲ. ಆದರೆ ಪ್ರತಿಯೊಬ್ಬ ಸದಸ್ಯರಿಗೂ ಅದರ ವಿವರಗಳು ದೊರೆತು ವಿಚಾರ ಅರ್ಥವಾಗಬೇಕೆನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.